CC No.582/2017
CW-7/PW-5

ಸಾಕ್ಷಿಯನ್ನು ದಿನಾಂಕ **14.10.2025** ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

<u>ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ ಡಿ ಎಫ್ ವಕೀಲರಿಂದಃ</u>

**1.** ನಮ್ಮ ಕಾರ್ಯಾಲಯದಿಂದ ಗ್ರಾಮೀಣ ನೀರಿಕ್ಷಕರು, ಆಹಾರ ನೀರಿಕ್ಷಕರು ಅಂತಾ ನೇಮಕ ಮಾಡಿರುತ್ತೇವೆ ಎಂದರೆ ಸರಿ. ಆ ಸಮಯದಲ್ಲಿ ನಂದಾ ಪಲ್ಲೇದ್ ಮತ್ತು ಹೆಚ್.ಎಸ್ ಬಗಲಿ ರವರು ನಗರ ಮತ್ತು ಗ್ರಾಮೀಣ ಆಹಾರ ನೀರಿಕ್ಷಕರು ಅಂತಾ ಇದ್ದರು ಎಂದರೆ ಸರಿ. ಆ ಸಮಯದಲ್ಲಿ ಹೆಚ್ ಎಸ್ ಬಗಲಿ ರವರು ಗುನ್ನಾ ಸ್ಥಳಕ್ಕೆ ಬಂದಿಲ್ಲ. ಅವರ ವ್ಯಾಪ್ತಿಯಲ್ಲಿ ಅಕ್ರಮ ನಡೆಯುತ್ತಿರುವ ಬಗೆಗ ನಮ್ಮ ಕಾರ್ಯಾಲಯಕ್ಕೆ ಯಾವುದೇ ಮಾಹಿತಿ ಬಂದಿರಲಿಲ್ಲ ಎಂದರೆ ಸರಿ.

2. ಗುನ್ನಾ ಜಾಗದಲ್ಲಿ ಪಡಿತರ ಅಕ್ಕಿ ಇತ್ತು ಎನ್ನುವುದರ ಬಗ್ಗೆ ಮೊದಲನೇಯದಾಗಿ ಯಾರಿಗೆ ಮತ್ತು ಯಾವ ರೀತಿ ಮಾಹಿತಿ ಬಂದಿರುತ್ತದೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಪಡಿತರ ಅಕ್ಕಿ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರ ಒಟ್ಟಿಗೆ ಸೇರಿ ಹಂಚುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಪಡಿತರ ಅಕ್ಕಿ ಪಡೆದುಕೊಳ್ಳಲು ಕಡುಬಡವರು ಮಾತ್ರ ಅರ್ಹರು ಎಂದರೆ ಸಾಕ್ಷಿಯು ಆ ಸಮಯದಲ್ಲಿ ಆ ರೀತಿ ಇರಲಿಲ್ಲ ಈಗ ಇದೆ ಎಂದು ಉತ್ತರಿಸುತ್ತಾರೆ. ಬಿ ಪಿ ಎಲ್ ಕಾರ್ಡ ಹೊಂದಿರುವರು ಮಾತ್ರ ಕಡುಬಡವರ ಎಂದು ಮತ್ತು ಅವರು ಪಡಿತರ ಅಕ್ಕಿ ಪಡೆಯಲು ಅರ್ಹರು ಎಂದರೆ ಸಾಕ್ಷಿಯು ಇರಬಹುದು ಎಂದು ಉತ್ತರಿಸುತ್ತಾರೆ.

3. ಕರ್ನಾಟಕ ಸರಕಾರ ಆದೇಶದನ್ವಯ ಜಿಲ್ಲಾವಾರು ಇಷ್ಟು ಇಷ್ಟು ಲೋಡ್ ಅಕ್ಕಿ ಅಂತಾ ಡಿ.ಸಿ ರವರ ಮೂಲಕ ಮಂಜೂರಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಜಿಲ್ಲಾಧಿಕಾರಿವರೇ ಯಾವ ಯಾವ ತಾಲೂಕು ಮತ್ತು ಗ್ರಾಮಗಳಿಗೆ ಎಷ್ಟು ಎಷ್ಟು ಅಕ್ಕಿ ಬೇಕು ಅಂತಾ ಮಂಜೂರು ಮಾಡುತ್ತಾರೆ ಎಂದರೆ ಸರಿಯಲ್ಲ. ಪ್ರತಿ ತಾಲೂಕಿನ ತಹಶಿಲ್ದಾರವರು ಪ್ರತಿ ನ್ಯಾಯ ಬೆಲೆ ಅಂಗಡಿಗೆ ಆ ರೀತಿ ಬಂದ ಅಕ್ಕಿಯನ್ನು ಪೂರೈಸುತ್ತಾರೇಂದರೆ ನನಗೆ ಮಾಹಿತಿ ಇಲ್ಲ. ಪ್ರತಿ ನ್ಯಾಯ ಬೆಲೆ ಅಂಗಡಿಯಲ್ಲಿ ಪ್ರತಿ ಕಾರ್ಡಿನ ಅನ್ವಯ ಅಕ್ಕಿ ಪೂರೈಸುತ್ತಾರೆಂದರೆ ಸರಿ. ಪ್ರತಿ ಕಾರ್ಡಿನ ಅನ್ವಯ ಇಷ್ಟೇ ಅಕ್ಕಿ ಕೊಡಬೇಕು ಅಂತಾ ಆದೇಶದ ಇರುತ್ತದೆ ಎಂದರೆ ಸರಿ.

4. ಪಡಿತರದಾರರು ಬಂದು ತಮ್ಮ ಹೆಬ್ಬಿಟಿನ ಗುರುತನ್ನು ಕೊಟ್ಟರೆ ಮಾತ್ರ ಅಕ್ಕಿ ಕೊಡುತ್ತಾರೆ ಎಂದರೆ ಸಾಕ್ಷಿಯು ಅದು ಈಗ ಜಾರಿಯಲ್ಲಿದೆ. ಆ ಸಮಯದಲ್ಲಿ ಇರಲಿಲ್ಲ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ಪ್ರತಿ ಕುಟುಂಬಕ್ಕೆ ಬೇಕಾಗುವ ಅಕ್ಕಿ ಸಂಬಂಧ ಟೋಕನ್ ಕೊಡುತ್ತಿದ್ದರು ಎಂದರೆ ಸರಿ. ತಹಶಿಲ್ದಾರ ಕಾರ್ಯಾಲಯಕ್ಕೆ ಪ್ರತಿ ನ್ಯಾಯ ಬೆಲೆ ಅಂಗಡಿಯವರು ಪ್ರತಿ ತಿಂಗಳ ಅಕ್ಕಿ ಪೂರೈಸಿದ ಬಗ್ಗೆ ಲೇಡ್ಜರ್ ಮುಖಾಂತರ ಮಾಹಿತಿ ಕೊಡುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಯಾವುದಾದರೂ ನ್ಯಾಯ ಬೆಲೆ ಅಂಗಡಿಯಲ್ಲಿ ಅಕ್ಕಿ ಸ್ಟಾಕ್ ಮಾಡಿರುವ ಬಗ್ಗೆ ನನಗೆ ವಾಹಿತಿ ಇಲ್ಲ. ಆ ಸಮಯದಲ್ಲಿ ಯಾವ ಪಡಿತರದಾರರು ಅಕ್ಕಿ ಪಡೆದುಕೊಂಡಿಲ್ಲ ಎಂಬ ಬಗ್ಗೆ ದಾಖಲಾತಿಯನ್ನು ನಾನು ನೋಡಿಲ್ಲ.

5. ಸರಕಾರದಿಂದ ಬರುವಂತಹ ಪಡಿತರ ಅಕ್ಕಿ ಶ್ರೀಮಂತರಿಗೆ ಮತ್ತು ಸರಕಾರಿ ನೌಕರರಿಗೆ ಪಡೆಯಲು ಅನರ್ಹರು ಎಂದರೆ ಸರಿ. ಗಂಗಾವತಿ ಭತ್ತದ ನಾಡು ಎಂದರೆ ಸರಿ. ಗಂಗಾವತಿಯಲ್ಲಿ ವಿವಿಧ ತಳಿಯ ಅಕ್ಕಿಗಳನ್ನು ಬೆಳೆಯುತ್ತಾರೆ ಎಂದರೆ ಸರಿ. ಅಕ್ಕಿ ಭಾಗ್ಯ, ಅನ್ನಭಾಗ್ಯ ಸ್ಕಿಮ್ ನಲ್ಲಿ ಎಷ್ಟು ಮಾಯಾಶ್ಚರೈಜ್ ಅಕ್ಕಿ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

6. ನಾನು ಗುನ್ಹೆ ಜಾಗಕ್ಕೆ ಹೋಗಿರುವುದಿಲ್ಲ ಮತ್ತು ನಾನು ಮೇಲಾಧಿಕಾರಿವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಗುನ್ಹಾ ಜಾಗ ಎಷ್ಟು ವಿಸ್ತೀರ್ಣದಲ್ಲಿ ಇದೆ ಎಂದು ಹೇಳಲಾಗುವುದಿಲ್ಲ. ಗೋಡೌನ್ ಪಕ್ಕದಲ್ಲಿ ಎಷ್ಟು ಗೋಡೌನ್ ಇವೆ ಹಾಗೂ ಎಷ್ಟು ಕೋಣೆಗಳು ಇವೆ ಎಂದು ನಾನು ನೋಡಿಲ್ಲ. ಗೋಡೌನ್ ಮಾಲೀಕತ್ವದ ಬಗ್ಗೆ ಮತ್ತು ಪಾಲುದಾರರ ಬಗ್ಗೆ ನನ್ನ ಮೇಲಾಧಿಕಾರಿಗಳು ಆ ಸಮಯದಲ್ಲಿ ವಿಚಾರಿಸಿಲ್ಲ. ಗೋಡೌನ್‌ನಲ್ಲಿ ಯಾವುದೇ ವಾಚ್‌ಮೆನ್ ಇರಲಿಲ್ಲ. ಗೋಡೌನ್‌ನ ಕಾಂಪೋಂಡ್‌ಗೆ ಗೇಟು ಇತ್ತು. ಆ ಗೇಟು ಮುಂದೆ ಯಾವುದೇ ವಾಚ್‌ಮೆನ್ ಇರಲಿಲ್ಲ ಎಂದರೆ ಸರಿ. ನಮ್ಮ ಜೊತೆ ಇದ್ದ ಸಿಬ್ಬಂದಿಗಳು ಗೋಡೌನ್‌ನ್ನು ಲಾಕ್ ಮಾಡಿ ಸೀಲು ಮಾಡಿರುತ್ತಾರೆ.

7. ಆ ದಿನ ಗುನ್ಹಾ ಸ್ಥಳದಲ್ಲಿ ಫೋಟೋ ಮತ್ತು ವೀಡೀಯೋ ಮಾಡಿದ ಬಗ್ಗೆ ನನಗೆ ನೆನಪಿಲ್ಲ. ನಾವು ಮರುದಿನ ಹೋದಾಗ ಅಲ್ಲಿ ಕುಚಲಕ್ಕಿ ಇದ್ದು, ನಾವು ಆ ದಿನ ಚಾಸಾ- 1 ಮತ್ತು ಅವರ ಸಿಬ್ಬಂದಿ ಗೋಡೌನ್‌ಗೆ ಹೋಗಿರುತ್ತೇವೆ. ಆ ಸಮಯ ಗೋಡೌನ್‌ಗೆ ಹಾಕಿದ್ದ ಲಾಕ್

ಮುರಿದಿರುವ ಬಗ್ಗೆ ಕಂಡು ಬಂತಾ ಎಂದರೆ ನಾನು ಅಂತಾಹದ್ದು ನೋಡಿಲ್ಲ. ಗುನ್ಹಾ ಸ್ಥಳದಲ್ಲಿ ಪಡಿತರ ಅಕ್ಕಿ ಇತ್ತು ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಡಿತರ ಅಕ್ಕಿ ಗೋಣಿ ಚೀಲದಲ್ಲಿ ಹಾಕಿ ಅದಕ್ಕೆ ಸರಕಾರದ ಸೀಲು, ಹಾಕಿ ನಂಬರ ಹಾಕಿ ಕಳುಹಿಸಿರುತ್ತಾರೆಂದರೆ ಸರಿ. ಗುನ್ಹಾ ಸ್ಥಳದಲ್ಲಿ ಪಡಿತರ ಅಕ್ಕಿ ಯಾವ ಯಾವ ಬ್ರ್ಯಾಂಡ್ನ ಚೀಲದಲ್ಲಿ ಇದ್ದವು ಎಂದು ನನಗೆ ಗೊತ್ತಿದೆ. ಸದರಿ ಚೀಲಗಳು ಎಷ್ಟು ತೂಕದ ಚೀಲಗಳು ಅಂತಾ ಸ್ಥಳದಲ್ಲಿದ್ದ ಇರುವಂತಹ ತೂಕದ ಯಂತ್ರದಿಂದ ನಮ್ಮ ಸಿಬ್ಬಂದಿ ತೂಕ ಮಾಡಿರುತ್ತಾರೆ. ಆ ರೀತಿ ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಆ ದಿನ ಗುನ್ಹಾ ಜಾಗಕ್ಕೆ ಯಾವುದೇ ಪಂಚರು ಬಂದಿಲ್ಲ ಹಾಗೂ ಸ್ಥಳದಲ್ಲಿ ಯಾವುದೇ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಅಕ್ಕಿಯನ್ನು ಯಾವ ವಾಹನದಲ್ಲಿ ಲೋಡ್ ಮಾಡಿದರು ಹಾಗೂ ಅದರ ನಂಬರ ಏನು ಅಂತಾ ಹೇಳಲಾಗುವುದಿಲ್ಲ. ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ಗುನ್ಹಾ ಜಾಗಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಗಂಗಾವತಿ